ಶ್ರೀ ಎಚ್. ಎಸ್. ಸಿದ್ದಪ್ಪ.—ಹಿಂದೂ ಪತ್ರಿಕೆಯ ಒಬ್ಬರು ವರದಿಗಾರರನ್ನು ಪೋಲೀಸರು ಆ ಸಭೆಯಿಂದ ಹೊರಗೆ ಕರೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟಿದ್ದರು. ನಂತರ ಬೇರೆ ಪತ್ರಿಕೆಯವರು ಹೋಗಿ ಬಿಡಿಸಿಕೊಂಡು ಬಂದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಬ್ರಾಹ್ಮಣರ ಸಮ್ಮೇಳನ ನಡೆದಾಗ ಕೆಲವರು ಬ್ಲಾಕ್ ಫ್ಲಾಗ್ ಡೆಮಾನ್‌ಸ್ಟ್ರೇಷನ್ ನಡೆಸಿದಾಗ ಮತ್ತೆ ಕೆಲವರು ಅವರನ್ನು ಹಿಡಿದುಕೊಂಡು ಹೊಡೆದರು. ಆ ಸಮಯದಲ್ಲಿ ಪೋಲೀಸರು ಅಲ್ಲಿ ಹಾಜರಿದ್ದರೂ ಸಹ ಹೊಡೆದವರ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ ಎಂದರೆ ನಾಚಿಕೆ ಪಡಬೇಕು. ಬ್ಲಾಕ್ ಫ್ಲಾಗ್ ಡೆಮಾನ್‌ಸ್ಟ್ರೇಷನ್ ಮಾಡುವುದಕ್ಕೆ ಎಲ್ಲರಿಗೂ ಅಧಿಕಾರವಿದೆ. ಅದರಂತೆ ಮಾಡಿದಾಗ ಅವರನ್ನು ಹಿಡಿದುಕೊಂಡು ಹೊಡೆಯುವುದಕ್ಕೆ ಪೋಲೀಸರಿಗೆ ಆಗಲೀ, ಬೇರೆಯವರಿಗೆ ಆಗಲೀ ಅಧಿಕಾರವಿಲ್ಲ. ಇದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬಾರದು ; ಪೋಲೀಸರೇನಾದರೂ ಇದೇ ರೀತಿ ನಡೆದುಕೊಂಡರೆ ನಾವು ಪ್ರತಿಭಟಿಸಬೇಕಾಗುತ್ತದೆ ಮತ್ತು ಅವರ ವಿರುದ್ಧ ತಿರುಗಿಸಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ತಮಗೆ ಸಮಕ್ಷಮ ಏನಾದರು ತಿಳಿವಳಿಕೆ ಇದ್ದರೆ ಹೇಳಿ ; ಕೇವಲ ಪೇಪರ್ ಓದಿ, ಅದರಲ್ಲಿ ಬಂದಿರುವುದು ಸರಿ ಎಂದು ನಂಬಿಕೊಂಡು ಹೇಳುವುದಾದರೆ ಅದಕ್ಕೆ ಉಪಾಯವಿಲ್ಲ. ಕಾಂಕ್ರೀಟ್ ಎಗ್‌ಜಾಂಪಲ್ ಇದ್ದರೆ ಕೊಡಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಪತ್ರಿಕೆಯ ಆಧಾರದ ಮೇಲೆ ಹೇಳುತ್ತಿಲ್ಲ ; ನಾನು ಅಲ್ಲಿಯೇ ಇದ್ದೆ. ಉನ್ನತ ಪೋಲೀಸ್ ಅಧಿಕಾರಿಗಳು ಹೇಳಿದ ಮೇಲೆ ಅವರನ್ನು ಬಿಡುಗಡೆ ಮಾಡಿದರು. ಈ ರೀತಿ ಪೋಲೀಸರು ನಡೆದುಕೊಳ್ಳುವುದು ಸರಿಯಲ್ಲ. ಯಾವ ಪೋಲೀಸರು ಈ ರೀತಿ ನಡೆದುಕೊಂಡರು ಎಂದು ಹೇಳೋಣವೆಂದರೆ, ಅವರ ಡ್ರೆಸ್ ಮೇಲೆ ನಂಬರ್ ಪ್ಲೇಟ್ ಸಹ ಇರಲಿಲ್ಲ ;

ಶ್ರೀ ಡಿ. ಕೆ. ನಾಯ್ಕರ್.—ತಾವು ಒಂದು ರೆಪ್ರಸೆಂಟೇಷನ್ ಕೊಡಿ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಮಾನ್ಯ ಸದಸ್ಯರು ಜವಾಬ್ದಾರಿಯುತವಾಗಿ ಹೇಳುತ್ತಿರುವುದರಿಂದ ತಾವು ಆ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿಸಬೇಕು.

Consequential difficulties due to permitting 9 Months Races in Bangalore

ಶ್ರೀ ಸಿ. ಬೈರೇಗೌಡ.—ಮಾನ್ಯ ನಾಗಣ್ಣನವರು ೫–೬ ದಿವಸಗಳ ಹಿಂದೆ ರೇಸ್ ವಿಚಾರ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಅದನ್ನು ವಿಚಾರ ಮಾಡುವುದಾಗಿ ಹೇಳಿದ್ದರು. ೯ ತಿಂಗಳ ಕಾಲ ರೇಸ್ ನಡೆಸುವುದಕ್ಕೆ ಅನುಮತಿ ಕೊಟ್ಟಿರುವುದರಿಂದ ಸಾಮಾನ್ಯ ಪೆಂಗಸರ ಮಾಂಗಲ್ಯಕ್ಕೂ ಕಂತ್ರು ಬಂದಿದೆ. ಹೊರಗಿನಿಂದ ಬರುವವರಿಗೆ ಹೋಟೆಲ್‌ಗಳಲ್ಲಿ ಜಾಗ ಸಿಗುತ್ತಿಲ್ಲ ; ಟ್ಯಾಕ್ಸಿಗಳು ಸಿಗುತ್ತಿಲ್ಲ.

ಅಧ್ಯಕ್ಷರು.—ತಾವು ಆ ಬಗ್ಗೆ ನೋಟೀಸ್ ಕಳುಹಿಸಿಕೊಡಿ ; ಸರ್ಕಾರಕ್ಕೆ ಕಳಿಸಿಕೊಡುತ್ತೇನೆ. ಮುಖ್ಯಮಂತ್ರಿಗಳು ಇಲ್ಲದಿರುವಾಗ ತಾವು ಪ್ರಸ್ತಾಪ ಮಾಡಿದರೆ ಯಾರು ಉತ್ತರ ಕೊಡುತ್ತಾರೆ ?

Appointing Mysoreans by the Reserve Bank of India

ಶ್ರೀ ಕೊಣಂದೂರು ಲಿಂಗಪ್ಪ.—ನಾಳೆ ನಾಡಿದ್ದರಿಂದ ರಿಜರ್ವ್ ಬ್ಯಾಂಕ್‌ನವರು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳತ್ತಾರೆ. ೫೦೦ ರೂಪಾಯಿಗಳಿಗಿಂತ ಕಡಿಮೆ ಸಂಬಳ ಇದ್ದರೆ, ಅಂತಹ ಜಾಗಗಳಿಗೆ ಸ್ಥಳೀಯ ಜನರನ್ನೇ ನೇಮಕ ಮಾಡಿಕೊಳ್ಳಬೇಕೆಂಬ ನಿಯಮವನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಈ ರೀತಿ ಕೇಂದ್ರ ಸರ್ಕಾರದ ಪಾಲಿಸಿ ಇದ್ದರೂ ಸಹ ರಿಜರ್ವ್ ಬ್ಯಾಂಕ್‌ನಲ್ಲಿ ಕನ್ನಡಿಗರಿಗೆ ಜಾಗ ಸಿಗುತ್ತಿಲ್ಲ. ಈ ರೀತಿ ನಮ್ಮ ರಾಜ್ಯದಲ್ಲಿಯೇ ಅನ್ಯಾಯವಾದರೆ ನಮ್ಮ ಜನರಂ ಎಲ್ಲಿಗೆ ಹೋಗಬೇಕು. ೯೦೦ ಜನರ ಪೈಕಿ ೩೦೦ ಜನರಿಗೆ ಮಾತ್ರ ಕೆಲಸ ಸಿಗುತ್ತದೆಂದು ಗೊತ್ತಾಗಿದೆ. ಇದೇ ಪರಿಸ್ಥಿತಿ ಮೈಸೂರು ಬ್ಯಾಂಕಿನಲ್ಲಿಯೂ ಬಂದಿದೆ. ಅಲ್ಲದೆ ಕೇಂದ್ರ ಸರ್ಕಾರದ ಕಾರ್ಖಾನೆಯಾದ ಎಚ್.ಎಂ.ಟಿ. ಯಲ್ಲಿಯೂ ಸಹ ೧೮ೆ ಜನರ ಪೈಕಿ ಕೇವಲ ೩ ಜನ ಕನ್ನಡಿಗರನ್ನು ತೆಗೆದುಕೊಂಡಿದ್ದಾರೆ, ೨೦೦ ರಿಂದ ೨೫೦ ರೂಪಾಯಿಗಳ ಸಂಬಳದ ಕೆಲಸಕ್ಕೂ ಸಹ ಕನ್ನಡಿಗರಿಗೆ ಪ್ರಾತಿನಿಧ್ಯ ಕೊಡುತ್ತಿಲ್ಲ. ಇಲ್ಲಿ ಸರ್ಕಾರದವರು ಹೇಳುವ ನೀತಿ ಒಂದಾದರೆ, ಅಲ್ಲಿನ ಅಧಿಕಾರಿಗಳು ವರ್ತಿಸುವ ಪರಿಯೇ ಬೇರೆಯಾಗಿದೆ. ಇಂತಹ ಅಧಿಕಾರಿಗಳನ್ನು ಸರ್ಕಾರದವರು ತರಾಟೆಗೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಜನರು ಬದುಕುವುದಾದರೂ ಹೇಗೆ ? ಇಲ್ಲಿಯವರೆಗೆ

(ಶ್ರೀ ಕೊಣಂದೂರು ಲಿಂಗಪ್ಪ)

ನಾವು ವಿಶಾಲ ಮನೋಭಾವ ಎಂಬ ಹೆಸರಿನಲ್ಲಿ ಸಹಿಸಿಕೊಂಡಿದ್ದಾಯಿತು. ಮತ್ತು ನಮ್ಮ ಮನೆಗೆ ಬೆಂಕಿ ಹಚ್ಚಿಕೊಂಡು ಊರಿಗೆ ಬೆಳಕನ್ನು ತೋರಿಸಿ ವಿಶಾಲ ಮನೋಭಾವವನ್ನು ತೋರಿಸಿದ್ದಾಯಿತು. ಇನ್ನು ಮುಂದೆಯೂ ಇದನ್ನು ಸಹಿಸಿಕೊಂಡಿರುವುದಕ್ಕೆ ಸಾಧ್ಯವಿಲ್ಲ. ಕನ್ನಡ ಓದುವ, ಬರೆಯುವ ಮಂತ್ರಿ ಮಾತ ನಾಡುವ ಜನರಿಗೆ ಮೊದಲು ಕೇಂದ್ರ ಸರ್ಕಾರದ ಕಾರ್ಖಾನೆಗಳಲ್ಲಿ ಮತ್ತು ರಿಜರ್ವ್ ಬ್ಯಾಂಕ್‌ನಲ್ಲಿ ಕೆಲಸ ಸಿಗುವಂತೆ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು.—ತಾವು ಈ ರೀತಿ ಮಾತನಾಡುತ್ತಾ ಹೋದರೆ ಯಾರು ಉತ್ತರ ಕೊಡಬೇಕು ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಸದನ ನಡೆಯುವ ಕಾಲದಲ್ಲಿ ಮುಂಖ್ಯ ಮಂತ್ರಿಗಳು ಇರಬೇಕು.

ಅಧ್ಯಕ್ಷರು.—ಅವರಿಗೂ ಸಹ ಬೇಕಾದಷ್ಟು ಕೆಲಸವಿರುತ್ತದೆ. ತಾವು ನೋಟೀಸ್ ಕೊಡದೆ ಪ್ರಸ್ತಾಪ ಮಾಡಿದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ಸಭೆ ನಡೆಯುವಾಗ ಅವರು ಸಭೆಯಲ್ಲಿ ಇರಬೇಕಾತ್ತದೆ.

ಅಧ್ಯಕ್ಷರು.—ಅದು ಆನ್‌ಚಾರಿಟಿಬಲ್. ತಾವು ನೋಟೀಸ್ ಕೊಟ್ಟೂ ಸಹ ಅವರು ಬರದಿದ್ದರೆ, ಅದು ತಪ್ಪು ಎಂದು ಹೇಳುವ ಜವಾಬ್ದಾರಿ ನನ್ನದು. ಆದರೆ ಇಲ್ಲಿ ಮಾನ್ಯ ಸದಸ್ಯರು ತಟಕ್ಕನೆ ಎದ್ದೆನಿಂತುಕೊಂಡು ಏನಾದರು ಹೇಳಿಬಿಟ್ಟರೆ ಯಾರು ಉತ್ತರ ಕೊಡುತ್ತಾರೆ ?

ಶ್ರೀ ಕೊಣಂದೂರು ಲಿಂಗಪ್ಪ.—ಜಂಟೀ ಜವಾಬ್ದಾರಿ ಇರುವುದರಿಂದ, ಬೇರೆ ಯಾರಾದರೂ ಮಂತ್ರಿಗಳು ಉತ್ತರ ಕೊಡಬಹುದು.

ಅಧ್ಯಕ್ಷರು.—ಇನ್ನು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳೋಣ.

MYSORE LAND REFORMS (Amendment) BILL, 1973 AS REPORTED BY THE J. S. C.

[—Consideration of Clauses (Debate Continue]

CLAUSE 14

MADAM SPEAKER.—Let us take up Legislative business now.

There is an amendment by Sri T. R. Shamanna. The Member is absent. So, I will now put it to the vote of the House.

The question is :

"That Clause 13 do stand part of the Bill."

The motion was adopted

Clause 13 was added to the Bill.

CLAUSE 14

MADAM SPEAKER.—I will put Clause 14 to the vote of the House. There are no amendments.

The question is :

"That Clause 14 do stand part of the Bill."

The motion was adopted

Clause 14 was added to the Bill.